ಈ ವಿಷಯದಲ್ಲಿ ಸದನದಲ್ಲಿ ಮಾತನಾಡುವುದನ್ನು ಬಿಟ್ಟುಬಿಡೋಣ. ನಾನು ಹಿಂದೆಯೂ ಇದನ್ನೇ ಹೇಳಿದ್ದೇನೆ. ಈ ಸದನದಲ್ಲಿ ಭಾಷೆಯ ಬಗ್ಗೆ, ಭಾಷಾ ಗೊಂದಲದ ಬಗ್ಗೆ ಮಾತನಾಡುವುದನ್ನು ಬಿಡುವುದು ಒಳ್ಳೆಯದು. ನಾನು ಮತ್ತೊಂದು ಸೂಚನೆ ಕೊಡುತ್ತೇನೆ. ಹಿಂದೆಯೂ ಇದನ್ನು ಕೊಟ್ಟಿದ್ದೇನೆ. ಸೋಮವಾರ ಅಥವಾ ಮಂಗಳವಾರ ಸನ್ಮಾನ್ಯ ಮುಖ್ಯ ಮಂತ್ರಿಗಳು ವಿರೋಧ ಪಕ್ಷದ ನಾಯಕರನ್ನು, ಭಾಷಾ ಪಂಡಿತರನ್ನು, ಅಲ್ಪಸಂಖ್ಯಾತರ ಪ್ರತಿನಿಧಿಗಳನ್ನು, ಕನ್ನಡ ಭಾಷೆಯಲ್ಲಿ ಪರಿಣತಿ ಯುಳ್ಳವರನ್ನು ಮತ್ತು ಚಳುವಳಿಯಲ್ಲಿರುವವರನ್ನು ಜರೂರಾಗಿ ಕರೆದು ಪರಸ್ಪರ ಚರ್ಚೆ ಮಾಡಬೇಕು. ಈ ವಿಷಯದಲ್ಲಿ ತಡಮಾಡಬಾರದು. ಸಾಧ್ಯವಾದರೆ ಸೋಮವಾರ ಅಥವಾ ಮಂಗಳವಾರ ಸಭೆ ಕರೆದು ಚರ್ಚೆ ನಡೆಸುವುದಲ್ಲದೆ ತಮಿಳುನಾಡಿನ ಎಂ. ಜಿ. ಆರ್. ಅವರನ್ನು ಮತ್ತು ಇತರ ಪ್ರತಿನಿಧಿಗಳನ್ನು ಪ್ರತ್ಯೇಕವಾಗಿ ಕರೆಸಿ ಇದರಲ್ಲಿರತಕ್ಕ ಎಲ್ಲ ಸಂಶಯಗಳನ್ನು, ಸಂದೇಹಗಳನ್ನು ನಿವಾರಿಸಿ ಪುಕಾರುಗಳು ಹರಡುವುದನ್ನು ತಡೆಹಿಡಿಯಬೇಕಾದ ಅವಶ್ಯಕತೆ ಇದೆ. ಸರ್ಕಾರದವರು ಈ ಕೆಲಸವನ್ನು ಸೋಮವಾರ ಅಥವಾ ಮಂಗಳವಾರ ಮಯಮಾಡಿ ಮಾಡಬೇಕು. ಎಲ್ಲರನ್ನೂ ಕರೆದು across the table ಚರ್ಚೆ ಮಾಡುವುದು ಅಗತ್ಯ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಇದು ಒಳ್ಳೆಯ ಸಲಹೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆದಷ್ಟು ಜಾಗ್ರತೆ ಚರ್ಚೆ ಮಾಡಿ ದುಷ್ಟ ಪರಂಪರೆಯನ್ನು ತಕ್ಷಣ ನಿಲ್ಲಿಸಬೇಕು ಎಂದು ಪಾರ್ಥನೆ ಮಾಡಿಕೊಳ್ಳುತ್ತೇನೆ.

ಡಾ|| ವಿ. ಎಸ್. ಆಚಾರ್ಯ.—ಆ ರಾಜ್ಯದ ಮುಖ್ಯ ಕಾರ್ಯದರ್ಶಿಯವರೂ ಇದರಲ್ಲಿ ಭಾಗವಹಿಸಲಿ.

SRI. M. VEERAPPA MOILY.—It is not that the Tamils hate Kannadigas and the Kannadigas hate the Tamils. But this is a very important matter.

ಈ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ. ಆ ವಿಚಾರದ ಬಗ್ಗೆ ಸೋಮವಾರ ಅಥವಾ ಮಂಗಳವಾರ ಯೋಚನೆ ಮಾಡಬೇಕಾಗುತ್ತದೆ. ಕಾರಣ ಈಗ ಮುಖ್ಯ ಮಂತ್ರಿಯವರು ಊರಿನಲ್ಲಿ ಇಲ್ಲ. ಅವರು ಬಂದಮೇಲೆ ಖಂಡಿತ ಮಾನ್ಯ ಮೊಯ್ಲಿಯವರನ್ನು ಈ ಬಗ್ಗೆ ಸಂಪರ್ಕಿಸಿ ಏನು ಯೋಚನೆ ಮಾಡಬೇಕು ಎಂಬ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಎನ್. ಜಿ. ನಾಯಕ್.—ಸದನ ನಡೆಯುವಾಗ ಮುಖ್ಯಮಂತ್ರಿಗಳು ಸದನದಲ್ಲಿ ಇರಬೇಕಾಗುತ್ತದೆ.

ಅಧ್ಯಕ್ಷರು.—ಈ ರೀತಿ ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ. ನಿಮ್ಮ ವಿರೋಧ ಪಕ್ಷದ ನಾಯಕರು ಸದನದಲ್ಲಿ ಇಲ್ಲ ಎಂದರೆ ಸಭೆ ನಡೆಸಲು ಆಗುವುದಿಲ್ಲವೇ ? ಸದಸ್ಯರು ಮಾತನಾಡುವಾಗ ಸ್ವಲ್ಪ ಯೋಚನೆ ಮಾಡಿ ಮಾತನಾಡಬೇಕಾಗುತ್ತದೆ.

(xii) ಮಡಕೇರಿ ಪುರಸಭೆ ವ್ಯಾಪ್ತಿಗೆ ಸೇರಿರುವ ಜಾಗದಲ್ಲಿ ರಸ್ತೆ ಮಧ್ಯದಲ್ಲಿ ದೊಡ್ಡ ಟ್ರಂಚನ್ನು ಹೊಡೆದು ರಸ್ತೆಯನ್ನು ಬ್ಲಾಕ್ ಮಾಡಿರುವುದರಿಂದ ತೊಂದರೆ ಉಂಟಾಗಿರುವ ಬಗ್ಗೆ

ಶ್ರೀ ಎಂ. ಎಂ. ನಾಣಯ್ಯ.—ಅಧ್ಯಕ್ಷರೇ, ಕೊಡಗು ಜಿಲ್ಲೆ ಮಡಕೇರಿ ಪುರಸಭೆ ವ್ಯಾಪ್ತಿಗೆ ಬರುವ ಮ್ಯಾನ್ಸ್ಸ್ ಕಾಂಪೌಂಡ್ ಎಂಬ ಜಾಗದ ಬಳಿಯಲ್ಲಿ ಕನ್ನಡ ಬಾನೆ ಎಂಬ ಜಾಗದಲ್ಲಿ ಸುಮಾರು ೩೦೦ ಕುಟುಂಬಗಳು ಅನೇಕ ವರ್ಷದಿಂದ ವಾಸ ಮಾಡುತ್ತಿವೆ. ಈ ಕನ್ನಡ ಬಾನೆ ಎಂಬ ಜಾಗದ ಬಳಿ ಮಡಿಕೇರಿ ಟೌನ್ ಮುನಿಸಿಪಲ್ ಕೌನ್ಸಿಲ್ ಲಿಮಿಟ್‌ಗೆ ಸೇರಿರುವ ಜಾಗದಲ್ಲಿ ರಸ್ತೆ ಮಧ್ಯೆ ದೊಡ್ಡ ಟ್ರಂಚನ್ನು ಹೊಡೆದು ರಸ್ತೆಯನ್ನು ಬ್ಲಾಕ್ ಮಾಡಿರುತ್ತಾರೆ. ಹಾಗೂ ಆ ಜಾಗ ಪ್ರೈವೇಟ್ ಪಾಪರ್ಟಿಗೆ ಸೇರಿದ್ದು ಎಂದು ಹೇಳುತ್ತಿದ್ದಾರೆ. ಹೀಗಾಗಿ ಅಲ್ಲಿ ಅನೇಕ ವಾಹನಗಳು ದಾರಿತಪ್ಪಿ

ಪಕ್ಕಕ್ಕೆ ಬಿದ್ದಿರುತ್ತವೆ. ಈ ಬಗ್ಗೆ ಪತ್ರ ಕೂಡಾ ನಾನು ಬರೆದಿದ್ದೇನೆ. ಈ ಬಗ್ಗೆ ಒಂದುಸಾರಿ ಮಾನ್ಯ ಚಂದ್ರಶೇಖರ್ ಅವರು ಮಂಡಿಕೇರಿಗೆ ಬಂದಿದ್ದಾಗ ಸ್ಥಳ ಪರಿಶೀಲನೆ ಮಾಡಿದ್ದಾರೆ. ಆದರೆ ಈ ಬಗ್ಗೆ ಯಾವುದೇ ಕಾರ್ಯಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಆಜಾಗ ನಮ್ಮದು ಎಂದು ಕೆಲವರು ಅಲ್ಲಿ ಹೇಳುತ್ತಿದ್ದು ಆದು ಸರ್ಕಾರದ ಜಾಗ ಎಂದು ಸರ್ಕಾರ ಹೇಳುತ್ತದೆ. ಒಂದು ಪಕ್ಷ ಇದು ಖಾಸಗೀ ಜಾಗ ಆಗಿದ್ದರೆ ಆ ಬಗ್ಗೆ ಪರಿಹಾರ ಕೊಟ್ಟು ಆದನ್ನು ಪಡೆದುಕೊಂಡು ಅಲ್ಲಿನ ಸಾರ್ವಜನಿಕರಿಗೆ ಉಪಕಾರ ಮಾಡಿ ಕೊಡಬೇಕಾಗಿ ವಿನಂತಿ.

ಶ್ರೀ ಎಂ. ಚಂದ್ರಶೇಖರ್ (ಮಾನ್ಯನಗರಾಡಳಿತ ಸಚಿವರು).— ಆಗಬಹುದು ಅಧ್ಯಕ್ಷರೇ.

FINANCIAL BUSINESS
DISCUSSION AND VOTING ON THE DEMANDS FOR GRANTS FOR THE YEAR 1984-85

Demand No. 53 (Co-operation)

SRI. R. L. JALAPPA (Minister for Co-opration).—

Sir, on the recommendation of the Governor. I beg to move :

"that asum not exeeeding Rs. 22.08,70,000 on Revenue Account and Rs. 22,53.70,000 on Capital Account to be Granted to the Covernment to defray the chrges which will come incouse of payment during the financial year ending 31st day of March 1985 in respect of Co-operation (Excluding Regulated Markets)."

Demand No. 54 (Regulated Market)

"That a sum not exceeding Rs. 4,77,30,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of regulated Markets."

The Question was proposed.

Demand No.55 (Rural Water Supply and Sanitation)

SRI A. LAKSHMISAGAR (Minister for law and Parlimentary Affairs).—Sir, on bealf of the Hon'ble Minister for Rural Development anq Panchayat Raj, on the recommendation of the Governor, I beg to move:

"That a sum no exceeding Rs. 66.78,00,000 on Revenue Account be granted to the Government to defray the charges which will come in course of payment during the financial year ending 31st day of march 1985 in respect of Rural Water Supply and Sanitation."